<u>**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕಡೂರು</u>

<u>ಅಸಲು ದಾವಾ ಸಂಖ್ಯೆ **137/2020**</u>

ವಾದಿ : ಶ್ರೀ ಎಂ.ವಿ.ಉಮಾರಾಧ್ಯ

- ವಿರುದ್ಧ -

ಪ್ರತಿವಾದಿಗಳು : ಶ್ರೀ ಎಂ.ವಿ.ಓಂಕಾರಸ್ವಾಮಿ ಮತ್ತು ಇತರರು.

<u>ವಿವಾದಾಂಶಗಳು</u>

1. 1 ಮತ್ತು 2 ನೇ ಪ್ರತಿವಾದಿಯರು ವಾದಿಗೆ ದಾವಾ ಷೆಡ್ಯೂಲ್ ಸ್ವತ್ತನ್ನು ಒಟ್ಟು ರೂ.1,01,000/- (ಒಂದು ಲಕ್ಷದ ಒಂದು ಸಾವಿರ) ಗಳಿಗೆ ಮಾರಾಟ ಮಾಡಲು ಒಪ್ಪಿ ದಿನಾಂಕ 23.02.2017 ರಂದು ಮುಂಗಡ ಹಣವಾಗಿ ರೂ.91,000/- ವನ್ನು 1 ಮತ್ತು 2 ನೇ ಪ್ರತಿವಾದಿಯರು ವಾದಿಯಿಂದ ಪಡೆದು ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆಂದು ವಾದಿಯು ರುಜುವಾತುಪಡಿಸುತ್ತಾರೆಯೇ?

2. ವಾದಿಯು ತನ್ನ ಪಾಲಿನ ಕರಾರು ನೆರವೇರಿಸಲು ಸದಾ ಸಿದ್ದ ಮತ್ತು ಇಚ್ಚೆಯುಳ್ಳವರಾಗಿದ್ದರು ಎಂದು ರುಜುವಾತುಪಡಿಸುತ್ತಾರೆಯೇ?

3. 1(ಎ) ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯರು, ಮೃತ 1 ನೇ ಪ್ರತಿವಾದಿಯು ದಿನಾಕ 21.06.2013 ರಂದು ದಾವಾ ಆಸ್ತಿಯನ್ನು ದಾನಪತ್ರದ ಮೂಲಕ 2 ನೇ ಪ್ರತಿವಾದಿಗೆ ಬರೆದುಕೊಟ್ಟಿರುವುದರಿಂದ ಮೃತ 1 ನೇ ಪ್ರತಿವಾದಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕ್ರಯ ಕರಾರು ಪತ್ರವನ್ನು ವಾದಿಗೆ ಬರೆದುಕೊಡಲು ಯಾವುದೇ ಅಧಿಕಾರ ಇಲ್ಲವೆಂದು ರುಜುವಾತುಪಡಿಸುತ್ತಾರೆಯೇ?

4. ವಾದಿಯು ಪ್ರತಿವಾದಿಯರಿಗೆ ಕ್ರಯದ ಕರಾರಿಗೆ ಮುಂಗಡ ಹಣವಾಗಿ ನೀಡಿರುವ ರೂ.91,000/- ಗಳನ್ನು ವಾರ್ಷಿಕ ಶೇ.16 ರ ಬಡ್ಡಿಯ ದರದಂತೆ ಹಿಂತಿರುಗಿಸಿ ಪಡೆಯಲು ಅರ್ಹರಿರುತ್ತಾರೆಯೇ?

5. ವಾದಿಯು ದಾವೆಯಲ್ಲಿ ಕೇಳಿದಂತೆ ಕರಾರಿನ ನಿರ್ದಿಷ್ಟ ಪರಿಪಾಲನೆ ಪರಿಹಾರವನ್ನು ಪಡೆಯಲು ಅರ್ಹರೇ?

6. ಯಾವ ಆದೇಶ ಅಥವಾ ಡಿಕ್ರಿ?

Sd/-

(ಸವಿತರಾಣಿ ಹೆಚ್.ವಿ)

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಕಡೂರು.

ದಿನಾಂಕಃ 03.07.2023.